# GATWU

**Garment and Textile Workers Union**

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್**

**(Affiliated to New Trade Union Initiative - NTUI)**

## ಸೆಪ್ಟೆಂಬರ್ 2, 2016 ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಆತ್ಮೀಯ ಸಂಗಾತಿಗಳೇ,

**ಕರ್ನಾಟಕದ ಗಾರ್ಮೆಂಟ್ಸ್ ಉದ್ಯಮದಲ್ಲಿ ಸುಮಾರು 5 ಲಕ್ಷ ಕಾರ್ಮಿಕರು ದುಡಿಯುತ್ತಿದ್ದು, ದೇಶಕ್ಕೆ ಹೆಚ್ಚು ವಿದೇಶೀ ವಿನಿಮಯ ಗಳಿಸುವುದರಲ್ಲೂ ಸಹ ಮುಖ್ಯ ಪಾತ್ರವಹಿಸುತ್ತಿದ್ದಾರೆ. ಗಾರ್ಮೆಂಟ್ಸ್ ಕಂಪನಿಗಳಲ್ಲಿ ತಯಾರಾದ ಉಡುಪುಗಳನ್ನು ಪ್ರತಿಷ್ಠಿತ ಅಂತರರಾಷ್ಟ್ರೀಯ ಬ್ರಾಂಡ್‌ಗಳಿಗೆ ರಫ್ತು ಮಾಡಲಾಗುತ್ತಿದೆ. ವರ್ಷಕ್ಕೆ ಲಕ್ಷಾಂತರ ಕೋಟಿ ಲಾಭ ಮಾಡುತ್ತಿರುವ ಈ ಉದ್ಯಮದಲ್ಲಿ ಶೇ ೯೦ ಭಾಗ ಮಹಿಳೆಯರೇ ದುಡಿಯುತ್ತಿದ್ದು, ಅತ್ಯಂತ ಕಡಿಮೆ ವೇತನ, ಕೆಲಸದ ಸ್ಥಳದಲ್ಲಿ ಕಿರುಕುಳ, ಅತಿ ಹೆಚ್ಚು ಪ್ರೊಡಕ್ಷನ್ ಒತ್ತಡ, 8 ಗಂಟೆಗಿಂತ ಹೆಚ್ಚು ದುಡಿಮೆ ಇಂತಹ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಶೋಷಣೆಯನ್ನು ಅನುಭವಿಸುತ್ತಿದ್ದಾರೆ.**

### ಅತ್ಯಂತ ಕಡಿಮೆ ವೇತನ

ಗಾರ್ಮೆಂಟ್ಸ್ ಕಾರ್ಮಿಕರಿಗೆ ಇಂದಿಗೂ ದೊರೆಯುತ್ತಿರುವುದು ಬಡತನದ ರೇಖೆಗಿಂತ ಕಡಿಮೆಯಾದ ತಿಂಗಳಿಗೆ ರೂ. 7462.00 (ಬೆಂಗಳೂರು ನಗರಕ್ಕೆ) ಗಳ ಕನಿಷ್ಠ ವೇತನ. 2014ರ ವರೆಗೆ ಕೇವಲ 4,700 ರೂ. ಇದ್ದ ಕನಿಷ್ಠ ವೇತನವು GATWU ವಿನ ಸತತ ಹೋರಾಟದಿಂದ 7462.00ರ ವರೆಗೆ ಹೆಚ್ಚಾಯಿತು. ಆದರೆ ಈ ವೇತನವೂ ಸಹ ವೈಜ್ಞಾನಿಕವಾಗಿ ನಿಗದಿ ಯಾಗಲಿಲ್ಲ. ಇಷ್ಟು ಕಡಿಮೆ ವೇತನವು ನಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಅತ್ಯಂತ ಕೆಳಮಟ್ಟಕ್ಕೆ ತಳ್ಳುತ್ತಿವೆ. ಅಗತ್ಯ ವಸ್ತುಗಳ ಬೆಲೆಗಳೆಲ್ಲ ಕೈಗೆಟುಕದಷ್ಟು ಹೆಚ್ಚಾಗಿರುವ ಈ ಸಂದರ್ಭದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಬಡತನದ ಜೀವನ ನಡೆಸುತ್ತಿದ್ದಾರೆ ಎಂಬುದು GATWU ನಡೆಸಿದ ಸಮೀಕ್ಷೆಯಿಂದ ಕಂಡುಬರುತ್ತದೆ.

### ಕೆಲಸದ ಸ್ಥಳದ ಕಿರುಕುಳ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಮುಖ್ಯವಾದ ಮತ್ತೊಂದು ಸಮಸ್ಯೆ ಎಂದರೆ ಕೆಲಸದ ಸ್ಥಳದ ಕಿರುಕುಳ. ದಿನನಿತ್ಯ ಸೂಪರ್‌ವೈಸರ್ ಮತ್ತು ಫ್ಲೋರ್‌ಇನ್ ಚಾರ್ಜರ್‌ಗಳ ಬೈಗುಳ, ಶಿಕ್ಷೆ, ದೈಹಿಕ ಹಲ್ಲೆ, ಅವಮಾನ, ಇದರೊಂದಿಗೆ ಅತೀವ ಪ್ರೊಡಕ್ಷನ್ ಒತ್ತಡ ಇವುಗಳಿಂದ ಮಹಿಳಾ ಕಾರ್ಮಿಕರು ಪ್ರತಿದಿನ 8 ಗಂಟೆಗಿಂತ ಹೆಚ್ಚು ಯಾವುದೇ ಭತ್ಯೆ ಇಲ್ಲದೆ ಕೆಲಸ ಮಾಡಬೇಕಾಗಿದೆ. ಕಿರುಕುಳವು ಅವರ ಕೆಲಸದ ಸ್ಥಳದ ಸ್ಥಿತಿಯನ್ನು ಶೋಚನೀಯಗೊಳಿಸಿದೆ. ಈ ಎರಡೂ ಕಾರಣಗಳು ಮಹಿಳಾ ಕಾರ್ಮಿಕರ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತಿದೆ.

ಈ ಹಿನ್ನೆಲೆಯಲ್ಲಿ **GATWU, ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (JCTU) ಯ ಜೊತೆಗೂಡಿ ದಿನಾಂಕ 02-09-2016** ರಂದು ಬೃಹತ್ ರ‍್ಯಾಲಿ ಹಾಗೂ ಸಭೆ ನಡೆಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹಾಗೂ ಆಡಳಿತ ವರ್ಗಗಳಿಗೆ ಈ ಕೆಳಗಿನ ಅಂಶಗಳನ್ನು ಕುರಿತು ಆಗ್ರಹಿಸುತ್ತಿದ್ದೇವೆ.

- **ರೂ. 18,000/–ಗಳ ರಾಷ್ಟ್ರವ್ಯಾಪಿ ಸಮಾನ ಕನಿಷ್ಠ ವೇತನ ನೀಡಬೇಕು.**
- **ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯವನ್ನು ಗೌರವಿಸಬೇಕು. ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಒ) ನ ಕಾರ್ಮಿಕ ಸಂಘ ರಚಿಸುವ ಹಕ್ಕು, ಸಾಮೂಹಿಕ ಚೌಕಾಸಿಯ ಹಕ್ಕು ಮತ್ತು ಕಾರ್ಮಿಕ ಸಂಘದ ಕಡ್ಡಾಯ ಮಾನ್ಯತೆಗೆ ನೀಡಬೇಕು.**
- **ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿ ಸ್ಥಾಪನೆಗಾಗಿ ಮತ್ತು ಅದಕ್ಕೆ ಅಗತ್ಯ ಬಜೆಟ್ ಹಣಕ್ಕಾಗಿ, ಹಾಗೂ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಸಾರ್ವಜನಿಕ ಭವಿಷ್ಯ ನಿಧಿ ಯೋಜನೆ ಜಾರಿಗೊಳಿಸಬೇಕು.**
- **ಉದ್ಯಮದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಕಿರುಕುಳ ಮುಕ್ತ ಕೆಲಸದ ವಾತಾವರಣದಲ್ಲಿ ಕೆಲಸ ಮಾಡಲು ನೆರವಾಗುವಂತೆ ಸರ್ಕಾರವು ಮೇಲ್ವಿಚಾರಣೆ ನಡೆಸಬೇಕು.**
- **ಕಾರ್ಮಿಕ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು.**
- **ಬೋನಸ್, ಗ್ರಾಚ್ಯುಟಿ, ESI, EPF, ಕಾಯ್ದೆಗಳಲ್ಲಿನ ಅರ್ಹತಾ ವೇತನ ಮತ್ತು ಪಾವತಿ ಮಿತಿ ರದ್ದುಗೊಳಿಸಬೇಕು.**
- **ಅಸಮರ್ಪಕ ಹಾಗೂ ದುಬಾರಿ ಸಾರಿಗೆ ವ್ಯವಸ್ಥೆಯಿಂದ ಮಹಿಳಾ ಕಾರ್ಮಿಕರು ಅತ್ಯಂತ ತೊಂದರೆಗೊಳಗಾಗುತ್ತಿದ್ದು, ಇದಕ್ಕೆ ಸರ್ಕಾರ ಅಗತ್ಯಕ್ರಮ ಕೈಗೊಳ್ಳಬೇಕು.**
- **ಬಂಡವಾಳ ಶಾಹಿ ಪರ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಬಾರದು.**

2016 ರ ಏಪ್ರಿಲ್ 18, 19 ರಂದು ಬೆಂಗಳೂರಿನಲ್ಲಿ ನಡೆದ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟವು ಕಾರ್ಮಿಕ ವಿರೋಧಿ ಪಿ.ಎಫ್. ಕಾಯ್ದೆ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ವಾಪಸ್ಸು ಪಡೆಯುವಂತೆ ಮಾಡಿತು. ಆದರೆ ಈ ಹೋರಾಟದಲ್ಲಿನ ಗಾರ್ಮೆಂಟ್ಸ್ ಕಾರ್ಮಿಕರ ಮೇಲೆ ದಾಖಲಿಸಿರುವ ಕ್ರಿಮಿನಲ್ ಪ್ರಕರಣಗಳನ್ನು ಸರ್ಕಾರ ವಾಪಸ್ಸು ಪಡೆಯದೆ ಮೀನಮೇಷ ಎಣಿಸುತ್ತಿದೆ.

ಕೇಂದ್ರ ಸರ್ಕಾರದ ಈ ಕಾರ್ಮಿಕ ವಿರೋಧಿ, ಜನ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು, GATWU ಮತ್ತು NTUI ಸೇರಿದಂತೆ ಕೇಂದ್ರ ಕಾರ್ಮಿಕ ಸಂಘಟನೆಗಳಾದ AITUC, CITU, INTUC, HMS, AIUTUC, AICCTU, TUCC, ಬ್ಯಾಂಕ್, ವಿಮಾ, ಕೇಂದ್ರ–ರಾಜ್ಯ ಸರ್ಕಾರಿ ನೌಕರರ ಸಂಘಗಳು ಮುಂತಾದ ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ 2016 ಸೆಪ್ಟೆಂಬರ್ 2 ರಂದು ಒಂದು ದಿನದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ. ಎಲ್ಲಾ ವಿಭಾಗದ ಕಾರ್ಮಿಕರು, ನೌಕರರು, ಜನ ಸಾಮಾನ್ಯರು ಈ ಮುಷ್ಕರವನ್ನು ಬೆಂಬಲಿಸಿ, ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿ.

*ಬನ್ನಿ . . . . . ತಾವೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ ಮುಷ್ಕರವನ್ನು ಯಶಸ್ವಿಗೊಳಿಸಿ*


**GATWU** **Garment and Textile Workers Union**
**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್**

ನಂ. 17/1, ಮೊದಲನೇ ಮಹಡಿ, ಬಿ.ಎಂ.ಟಿ.ಸಿ ಬಸ್ ಸ್ಟಾಪ್ ಹತ್ತಿರ
ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 026.
**ಮೊಬೈಲ್ ಸಂಖ್ಯೆ : 9901290495, 8792156541, 9686229761**